# 2 ನೇ ಹೆಚ್ಚುವರಿ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ನಂಜನಗೂಡು.

ಓ ಎಸ್ ನಂ.99-2014 ಪಿ . ಡಬ್ಲುಃ 1

| | |
|---|---|
| | ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕ 21-06-2022. |

**ಮುಂದುವರೆದ ಪಾಟೀ ಸವಾಲು ಪ್ರತಿವಾದಿ ಪರ ವಕೀಲರಾದ ಶ್ರೀ ಎಸ್.ಎಸ್ ರವರಿಂದಃ-**

15.ನನ್ನ ಸೋದರಅತ್ತೆ ಮಹದೇಮ್ಮನವರಿಗೆ ನೀಡಿದ ಜಮೀನಿನ ದಕ್ಷಿಣಕ್ಕೆ ಮಹದೇವಪ್ಪ ಕಾಳಿಂಗಪ್ಪ ಮತ್ತು ಪುಟ್ಟಬುದ್ದಿರವರ ಜಮೀನು ಇರುತ್ತದೆ ಎಂದರೆ ಸರಿ. ಸದರಿ ಜಮೀನು ನಾನು ಮತ್ತು ನನ್ನ ದೊಡ್ಡಪ್ಪನ ಮಕ್ಕಳು ಸ್ವಾಧೀನದಲ್ಲಿ ಇರುವ ಜಮೀನು ಎಂದರೆ ಸರಿ. ನಮ್ಮ ಸೋದರಅತ್ತೆಯ ಜಮೀನಿನ ಪೂರ್ವಕ್ಕೆ-ಕಾಳಮ್ಮನವರ ಮಕ್ಕಳ ಜಮೀನು ಇರುತ್ತದೆ ಎಂದರೆ ಸರಿಯಲ್ಲ. ನನ್ನ ಅತ್ತೆಯವರು ಜಮೀನಿನ ಪೂರ್ವಭಾಗದಲ್ಲಿ ಪ್ರತಿವಾದಿಯವರ ತಾಯಿ ಕಾಳಮ್ಮನವರು ಜಮೀನನ್ನು ಹೊರತುಪಡಿಸಿ ಬೇರೆ ಯಾರಾದರೂ ಕಾಳಮ್ಮ ಎಂಬ ಹೆಸರಿನವರ ಜಮೀನು ಇರುಬಹುದೇ ಎಂಬ ಪ್ರಶ್ನೆಗೆ ಸಾಕ್ಷಿ ಇರಬಹುದು ಎಂದು ನುಡಿಯುತ್ತಾರೆ. ಪ್ರತಿವಾದಿಯವರ ತಾಯಿ ಕಾಳಮ್ಮನವರನ್ನು ಹೊರತುಪಡಿಸಿ ಬೇರೆ ಕಾಳಮ್ಮ ಎಂಬುವವರು ಜಮೀನು ನನ್ನ ಸೋದರ ಅತ್ತೆಯವರ ಜಮೀನಿನ ಪೂರ್ವದಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ, ಹಾಗಾದರೆ ಸದರಿ ಕಾಳಮ್ಮನವರ ಗಂಡನ ಹೆಸರು ಏನು ಎಂಬ ಪ್ರಶ್ನೆಗೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನನ್ನ ಸೋದರ ಅತ್ತೆಯ ಜಮೀನಿನ ಪೂರ್ವಕ್ಕೆ ಪ್ರತಿವಾದಿಯ ತಾಯಿ ಕಾಳಮ್ಮ ನವರ ಸ್ವಾಧೀನದ ಜಮೀನು ಇರುತ್ತದೆ ಎಂದರೆ ಸರಿಯಲ್ಲ.

16. ನ್ಯಾಯಾಲಯದಲ್ಲಿ ಹಾಜರಿರುವ ಪ್ರತಿವಾದಿ ಹೆಸರು ದೇವಣ್ಣ, ಆದರೆ ಅವರ ತಂದೆ-ತಾಯಿ ಹೆಸರು ನನಗೆ ಗೊತ್ತಿಲ್ಲ. ಪ್ರತಿವಾದಿ ಮಲ್ಲುಂಡಿ ಗ್ರಾಮವದರು. ದಾವಾ ಸಲ್ಲಿಸುವ ವೇಳೆ ಪ್ರತಿವಾದಿಯವರ ತಂದೆಯವರ ಹೆಸರನ್ನು ನಾನೇ ಹೇಳಿ ಬರೆಸಿರುತ್ತೇನೆ. ಪ್ರತಿವಾದಿ ತಂದೆ ಹೆಸರು ಜವನಯ್ಯ, ತಾಯಿಯವರ ಹೆಸರು ಕಾಳಮ್ಮ. ಪ್ರತಿವಾದಿ ನನ್ನ ತಂದೆ ಸೋದರ ಸಂಬಂಧಿ ಆಗಿದ್ದು, ಸೋದರ ಸಂಬಂಧವನ್ನು ಒಪ್ಪಿಕೊಂಡರೆ ಅವರಿಗೂ ಸಹ ಆಸ್ತಿ ನೀಡಬೇಕಾಗುತ್ತದೆ ಎಂದು ಪ್ರತಿವಾದಿ ನನ್ನ ಸಂಬಂಧಿ ಅಲ್ಲ ಎಂದು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಷೆಡ್ಯೂಲ್ ಸ್ವತ್ತಿನ ವಿಸ್ತೀರ್ಣ 6 ಎಕರೆ ಪೈಕಿ, 3 ಎಕರೆ 8 ಗುಂಟೆ ಸ್ವತ್ತಿನಲ್ಲಿ ಪ್ರತಿವಾದಿ ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು 6 ಎಕರೆ ಜಮೀನಿನಲ್ಲಿ ನಾನೇ ಸ್ವಾಧೀನದಲ್ಲಿ

ಇರುತ್ತೇನೆ ಎಂದು ನುಡಿಯುತ್ತಾರೆ. ಪ್ರತಿವಾದಿಗೆ ಸೇರಿದ 3 ಎಕರೆ 8 ಗುಂಟೆ ಜಮೀನಿನ ಪೈಕಿ 32 ಗುಂಟೆ ಜಮೀನು ನುಗು ಜಾಲಾಶಯಕ್ಕೆ ಹೋಗಿ ಈಗ ಹಾಲಿ 1 ಎಕರೆ 18 ಗುಂಟೆ ಜಮೀನಿನ ಪಹಣಿ ಪ್ರತಿವಾದಿ ಹೆಸರಿನಲ್ಲಿ ಬರುತ್ತಿದೆ ಎಂದರೆ ಸರಿಯಲ್ಲ. ಪ್ರತಿವಾದಿಗೆ ಸೇರಿದ 32 ಗುಂಟೆ ಜಮೀನು ನುಗು ಜಲಾಶಯಕ್ಕೆ ಭೂ ಸ್ವಾಧೀನವಾದಾಗ ಪ್ರತಿವಾದಿ ತಂದೆ ಜವನಯ್ಯನವರೇ ಪರಿಹಾರದ ಹಣವನ್ನು ಸರ್ಕಾರದಿಂದ ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ.

17. ದಾವಾ ಷೆಡ್ಯೂಲ್ ಸ್ವತ್ತಿನ ವಿಸ್ತೀರ್ಣ 6 ಎಕರೆ ಪೈಕಿ 1 ಎಕರೆ 7 ಗುಂಟೆ ಜಮೀನು ನುಗು ಜಲಾಶಯಕ್ಕೆ ಭೂ ಸ್ವಾಧೀನವಾಗಿದ್ದು ಪರಿಹಾರದ ಹಣವನ್ನು ನನ್ನ ದೊಡ್ಡಪ್ಪನವರು ಪಡೆದುಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ದಾವಾ ಷೆಡ್ಯೂಲ್ ಸ್ವತ್ತಿನ ವಿಸ್ತೀರ್ಣ 6 ಎಕರೆ ಜಮೀನಿನಲ್ಲಿ ಸ್ವಾಧೀನದಲ್ಲಿ ಇದ್ದೇನೆ ಎಂಬುದನ್ನು ತೋರಿಸಲು ನ್ಯಾಯಾಲಯಕ್ಕೆ ದಾಖಲೆ ಹಾಜರುಪಸಿಡಿದ್ದೇನೆ. ಸಾಕ್ಷಿ ಮುಂದುವರೆದು ನನ್ನ ತಾತನವರು ಕೊಂಡುಕೊಂಡ ದಾಖಲೆಯನ್ನು ನೀಡಿರುತ್ತೇನೆ. ನಾನು ಹೇಳುವಂತೆ ಯಾವುದೇ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ದಾವಾ ಒಟ್ಟು ಸ್ವತ್ತಿನ ವಿಸ್ತೀರ್ಣದಲ್ಲಿ ಸ್ವಾಧೀನದಲ್ಲಿ ಇಲ್ಲದೆ ಇರುವುದರಿಂದ ನಾನು ದಾವಾದಲ್ಲಿ ಕೋರಿರುವ ಪರಿಹಾರಕ್ಕೆ ಅರ್ಹನಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ ಸ್ವಾಧೀನವನ್ನು ಒಪ್ಪಿಕೊಂಡ ಪಕ್ಷದಲ್ಲಿ ನನ್ನ ದಾವೆಗೆ ತೊಂದರೆ ಆಗುತ್ತದೆ ಎಂಬ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳುವಂತೆ ದಾವಾ ಷೆಡ್ಯೂಲ್ ಸ್ವತ್ತಿನ ವಿಸ್ತೀರ್ಣ 6 ಎಕರೆ ಅಸ್ತಿತ್ವದಲ್ಲಿ ಇಲ್ಲದೇ ಇರುವುದರಿಂದ ನಾನು 6 ಎಕರೆ ಸ್ವತ್ತಿಗೆ ಹಕ್ಕುದಾರನಲ್ಲ, ಕೇವಲ 1 ಎಕರೆ 4 ಗುಂಟೆ ಸ್ವತ್ತಿಗೆ ಮಾತ್ರ ನಾನು ಹಕ್ಕುದಾರ ಎಂದರೆ ಸರಿಯಲ್ಲ. ನಾನು ಸಲ್ಲಿಸಿರುವ ನಿಪಿ–3 ರಲ್ಲಿ ಸ್ವತ್ತಿನ ವಿಸ್ತೀರ್ಣ 1 ಎಕರೆ 18 ಗುಂಟೆ ಸ್ವತ್ತಿನ ಖಾತೆಯು ಪ್ರತಿವಾದಿಯ ಹೆಸರಿನಲ್ಲಿ ಇರುತ್ತದೆ ಎಂದರೆ ಸರಿಯಲ್ಲ. 1 ಎಕರೆ 18 ಗುಂಟೆ ಸ್ವತ್ತಿಗೆ ಪ್ರತಿವಾದಿ ಕಂದಾಯವನ್ನು ಪಾವತಿ ಮಾಡುತ್ತಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

18. ನಾನು ದಾವಾ ಷೆಡ್ಯೂಲ್ ಸ್ವತ್ತಿನ ಒಟ್ಟು ವಿಸ್ತೀರ್ಣ 6 ಎಕರೆ ಸ್ವತ್ತಿಗೆ ಕಂದಾಯವನ್ನು ಪಾವತಿ ಮಾಡಿರುವುದಿಲ್ಲ, ಆದರೆ ನನ್ನ ತಂದೆ ಮತ್ತು ತಾತನವರು ಕಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ನನ್ನ ತಂದೆ ತಾತನವರು ಕಂದಾಯ ಪಾವತಿ ಮಾಡಿದ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಾನ ಹೇಳುವಂತೆ ಯಾವುದೇ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ ವಿರುದ್ಧ ಯಾವುದೇ ವ್ಯಾಜ್ಯ ಕಾರಣ ಇಲ್ಲದೆ ಇದ್ದರೂ ಅವರಿಗೆ ತೊಂದರೆ ನೀಡಲು ಈ ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನನ್ನ ತಾತನವರ ಜೀವಿತಾವಧಿಯಲ್ಲಿಯೇ ಷೆಡ್ಯೂಲ್ ಸ್ವತ್ತು ಪೋಡಾಗಿದ್ದು ಅದನ್ನು

ಮರೆಮಾಚಿ ಪ್ರತಿವಾದಿ ವಿರುದ್ಧ ಸುಳ್ಳು ದಾವಾವನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಸಲ್ಲಿಸಿರುವ ಮುಖ್ಯ ವಿಚಾರಣಾ ಪ್ರಮಾಣ ಪತ್ರವೂ ವಾಸ್ತವಾಂಶಗಳಿಗೆ ದೂರವಾಗಿದ್ದು ಸುಳ್ಳಿನಿಂದ ಕೂಡಿರುತ್ತದೆ ಎಂದರೆ ಸರಿಯಲ್ಲ. ಸರ್ವೆ ನಂ.2/1 ರಲ್ಲಿ ಮೊದಲಿಗೆ ಪ್ರತಿವಾದಿ ತಂದೆ ಜವನಯ್ಯ, ಅವರ ಮರಣಾ ನಂತರ ಅವರ ಪತ್ನಿ ಕಾಳಮ್ಮ, ಅವರ ನಂತರ ಈ ಪ್ರತಿವಾದಿಯು ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿಯ ಆಸ್ತಿಯನ್ನು ಕಬಳಿಸಬೇಕೆಂಬ ಉದ್ದೇಶದಿಂದ ಪ್ರತಿವಾದಿ ವಿರುದ್ಧ ಸುಳ್ಳು ದಾವಾವನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಷೆಡ್ಯೂಲ್ ನಲ್ಲಿ ನಮೂದಿಸಿರುವ ಚೆಕ್ಕುಬಂದಿಯು ಸುಳ್ಳಿನಿಂದ ಕೂಡಿರುತ್ತದೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಸಹಿ/-**

**2 ನೇ ಪ್ರ.ದ. ನ್ಯಾ ದಂ. ನಂಜನಗೂಡು**